ಈಗಿನ ಬದುಕ ವೈಖರಿಯಲ್ಲಿಯೂ ನಮ್ಮ ವಿಭಕ್ತ ಕುಟುಂಬದವರೆಲ್ಲಾ ಮನೆಯಿಂದ ಎಲ್ಲಾದರೂ ಒಟ್ಟಾಗಿ ಹೊರಡುವುದೆಂದರೆ ಮುಗಿಯದ ಕೆಲಸ. ಪೆರಿಶಬಲ್ ಎನಿಸಬಹುದಾದ ಕೆಲವನ್ನು ಫ್ರಿಜ್‌ನೊಳಗೆ ತುರುಕಿ, ಹಲ ವಸ್ತುಗಳನ್ನೆಲ್ಲಾ ವಿಲೇವಾರಿ ಮಾಡಿ, ಶಾಶ್ವತವೆನಿಸುವ ಗಟ್ಟಿಯವುಗಳನ್ನು ಸರಿಯಾಗಿ ನೆಲೆಗೊಳಿಸಿ, ಮನೆಯಿಂದ ಹೊರಜಗತ್ತಿಗೆ ತೆರೆದಿರುವ ತೆರಪುಗಳನ್ನೆಲ್ಲಾ ನಮ್ಮ ಆಜನ್ಮ ಆತಂಕಕಾರಿ ಶತ್ರುಗಳೆನಿಸುವ ಮಿತ್ರರಾದ ಇಲಿ, ಜಿರಲೆಗಳು ಒಳ ಪ್ರವೇಶಿಸದಂತೆ ಮುಚ್ಚಿ, ಮನೆಯ ಭದ್ರತೆಯ ಬಗ್ಗೆ ವಿಶೇಷ ಎಚ್ಚರಿಕೆ ಕ್ರಮಗಳನ್ನು ಕೈಗೊಂಡು... ಮುಂತಾದ ಕಾರ್ಯಪರಂಪರೆಗಳಲ್ಲಿ ನಿಮಗ್ನಳಾಗಿರುವಾಗಲೇ ಇವರು 'ನನ್ನ ಮೊಬೈಲ್ ಎಲ್ಲಿ?' ಎಂಬ ಕಾತುರದಲ್ಲಿ ನಾನು ಜೋಡಿಸಿಟ್ಟವುಗಳನ್ನೆಲ್ಲಾ ಚೆಲ್ಲಾಪಿಲ್ಲಿಗೊಳಿಸಿ, 'ನೀನೂ ಸ್ವಲ್ಪ ಹುಡುಕು ಬೇಗ' ಎನ್ನುತ್ತಾ ನನ್ನ ಕೆಲಸಗಳ ಶ್ರೇಣಿಗೆ ತಮ್ಮದನ್ನೂ ಸೇರಿಸಿ ನನ್ನನ್ನೂ ಅಡಿಷನಲ್ ಕಾರ್ಯತತ್ಪರಗೊಳಿಸಿರುವಾಗಲೇ, ಟೇಬಲ್‌ಕ್ಲಾತ್‌ನ ಅಡಿಯಿಂದ ಪಿಳಿಪಿಳಿ ಕಣ್ಣು ಬಿಡುತ್ತಾ ಅರಚಲಾರಂಭಿಸಿದ ಮೊಬೈಲ್ ಪುಟ್ಟನತ್ತ ನೋಡುವಷ್ಟರಲ್ಲಿಯೇ, 'ಒಂದು ರಿಂಗ್ ಕೊಟ್ಟರೆ ಆಗಲ್ವಾ, ಅದಕ್ಕೆ ಎಲ್ಲಾ ಸಾಮಾನನ್ನೂ ಕಿತ್ತು ಹಾಕಬೇಕಾ?' ಎಂದು ರಂಗಪ್ರವೇಶ ಮಾಡುವ ನನ್ನ ಕಂದ ನನ್ನ ಮುಗಿಯದ ಕೆಲಸಗಳ ಸರಣಿಯಿಂದ ಸಹನೆ ಮೀರಿ, 'ಅಮ್ಮಾ, ಬೆಳಗಿಂದ ರಾತ್ರಿವರೆಗೂ ನೊಯನೊಯ ಅಂತ ಕೆಲಸ ಮಾಡ್ತಾನೇ ಇರ್ತೀಯಾ. ನಿನಗೆ ಸ್ಮಾರ್ಟ್‌ವರ್ಕ್ ಮಾಡಕ್ಕೇ ಬರಲ್ಲ. ಅದಕ್ಕೇ ಸಮಯಕ್ಕೆ ಸರಿಯಾಗಿ ಹೊರಡಕ್ಕೂ ಆಗಲ್ಲ' ಎನ್ನುವಾಗ ನನ್ನ ಪರಂಪರಾನುಗತ ಕಾರ್ಯ ಚಾತುರ್ಯವನ್ನೇ ಧಿಕ್ಕರಿಸಿದಂತಾಗಿ, ಹಾಗಾದರೆ ಇಷ್ಟು ವರ್ಷ ನಾನು ನಡೆಸಿಕೊಂಡು ಬಂದದ್ದೆಲ್ಲಾ ವ್ಯರ್ಥವೇ ಎನಿಸುವ ಮೊದಲೇ ಇದೇನಿದು, 'ಸ್ಮಾರ್ಟ್‌ವರ್ಕ್' ಎಂಬ ಕುತೂಹಲವೂ ಬಿಡದೆ ಕಾಡಲಾರಂಭಿಸಿತು.

ನಮ್ಮ ಹಳ್ಳಿಯ ಮನೆಯಲ್ಲಿ ಅಮ್ಮ ಹಗಲು ಹೊತ್ತು ಮೂಡುವಾಗಿನಿಂದ ರಾತ್ರಿ ಮಲಗುವವರೆಗೂ ಮೂಗಿಗೆ ಕವಡೆ ಕಟ್ಟಿಕೊಂಡ ಮೂಕಪಶುವಿನಂತೆ ದುಡಿದರೂ ಮನೆಯ ಕೆಲಸ ಮುಗಿಯುತ್ತಿರಲಿಲ್ಲ. ಬೆಳಗಿನ ತಿಂಡಿ ರೊಟ್ಟಿಯನ್ನು ಮಾಡಲು ಹಿಟ್ಟು ಬೀಸಿಕೊಳ್ಳಬೇಕು, ಅಡುಗೆಗೆ ಅನ್ನ ಮಾಡಲು ದೂರದ ಪಟ್ಟಣದ ಮಿಲ್‌ಗೆ ಹೋಗಲಾಗದಿದ್ದರೆ ಭತ್ತ ಕುಟ್ಟಿ ಅಕ್ಕಿ ಸಿದ್ಧಪಡಿಸಿಕೊಳ್ಳುವುದು, ಮಿಲ್ ಮಾಡಿಸಿದ್ದರೂ ಮೊರ– ವಂದರಿ ಹರಡಿಕೊಂಡು ಕೂತು ಅಕ್ಕಿಯಲ್ಲಿರುವ ಕಲ್ಲು, ನುಚ್ಚು ಮತ್ತು ಭತ್ತವನ್ನು ತೆಗೆದು ಹಸನುಗೊಳಿಸಿಕೊಳ್ಳುವುದು, ಒಲೆಗೆ ಸೌದೆ ಹೊಂಚಿಕೊಳ್ಳುವುದು... ಮುಗಿಯದ ಕೆಲಸ ಪರಂಪರೆ. ಸಾಲದ್ದಕ್ಕೆ ಬಾವಿಯಿಂದ ನೀರು ಸೇದುವುದು, ಎರಡು ಮೈಲಿ ದೂರದ ಗದ್ದೆಗೆ ಕರೆಯುವ ಹಸುವಿನೊಂದಿಗೆ ಹೋಗಿ ಬದುವಿನಲ್ಲಿ ಹುಲ್ಲು ಕೊಯ್ದುಕೊಂಡು ಹೊರೆ ಹೊತ್ತು ಬರುವುದು... ನನಗೆ ಬುದ್ಧಿ ತಿಳಿದಾಗಿನಿಂದ ನಾನೂ ಸ್ಕೂಲಿಗೆ ರಜವಿದ್ದಾಗಲೆಲ್ಲಾ ಅಮ್ಮನೊಂದಿಗಿದ್ದು ಅವರ ಎಲ್ಲಾ ಕೆಲಸಗಳಿಗೂ ಸಾಥ್ ನೀಡುತ್ತಾ ಶಹಬ್ಬಾಸ್‌ಗಿರಿ ಪಡೆಯುವುದನ್ನು ಬಿಡುತ್ತಿರಲಿಲ್ಲ. ಹೀಗಾಗಿ ಕಷ್ಟಪಟ್ಟು ದುಡಿಯುವುದು ನನ್ನ ಬದುಕಿನ ಕ್ರಮವೇ ಆಗಿ ನಾನೂ ಆಗಿನ ಅನಿವಾರ್ಯತೆಯ ಆ ರೂಢಿಯನ್ನು ಈಗಿನ ತಾಂತ್ರಿಕ ಯುಗಕ್ಕೂ ರವಾನಿಸಿಕೊಂಡು 'ಹಾರ್ಡ್‌ವರ್ಕ್' ಹುಳುವಾಗುವಂತಾಯಿತು.

ಅಜ್ಜಿ, ಅಮ್ಮನ ಕಾಲದಲ್ಲಿಯೇನೋ ಯಾವುದೇ ತಾಂತ್ರಿಕ ಸೌಲಭ್ಯವೂ ಇಲ್ಲದೇ ದೈಹಿಕ ಶ್ರಮದಿಂದಲೇ ಬದುಕ ಬಂಡಿಯನ್ನು ಎಳೆಯಬೇಕಿತ್ತು. ಆದರೆ ಈಗ? ಮಿಕ್ಸಿ, ಗ್ರೈಂಡರ್, ವಾಷಿಂಗ್ ಮೆಶಿನ್ ಮುಂತಾಗಿ ದೊರೆಯುತ್ತಿರುವ ಇಷ್ಟೆಲ್ಲಾ ಸೌಕರ್ಯಗಳ ನಡುವೆಯೂ ಅದೇ ಗುಡ್‌ಓಲ್ಡ್ ಪ್ಯಾಟ್ರನ್‌ನಲ್ಲಿಯೇ ಬದುಕು ನಡೆಸಿದರೆ ಹೇಗೆ? ಅಂದ್ರೆ ಸ್ಮಾರ್ಟ್‌ವರ್ಕ್?

ಮನೆಗೆ ಒಮ್ಮೆ ಬೆಳಗ್ಗೆಯೇ ಅನಿರೀಕ್ಷಿತವಾಗಿ ಅತಿಥಿಗಳು ಆಗಮಿಸುವ ಫೋನ್ ಕರೆ ಬಂದಾಗ ಕೆಲಸದ ಸಹಾಯಕಿಯೂ ಅಂದೇ ಚಕ್ಕರ್ ಹೊಡೆದಿದ್ದರಿಂದ ದಡಬಡಾಯಿಸಿ ಬೇಗಬೇಗ ಕಸ ಗುಡಿಸಲು ವ್ಯರ್ಥಪ್ರಯತ್ನ ನಡೆಸುತ್ತಿದ್ದಾಗ ಮಗ ಪೊರಕೆಯನ್ನು ತೆಗೆದುಕೊಂಡು ಕಸವನ್ನೆಲ್ಲಾ ಸೋಫಾ ಅಡಿಗೆ ದೂಡಿ ಕ್ಷಣಾರ್ಧದಲ್ಲಿ ಅವರು